ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 13॥ UDP/1263/2018-20 || R.NO.50495/91 ॥ ತಾರೀಕು : 23–04–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಉಡುಪಿ– ಚಿಕ್ಕಮಗಳೂರು ಕ್ಷೇತ್ರ ಭದ್ರತಾ ಕೊಠಡಿಯಲ್ಲಿ ಮತಯಂತ್ರ ಭದ್ರ




ಉಡುಪಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಈ ಬಾರಿ ಕಳೆದ ಚುನಾವಣೆಗಿಂತ 1.42ರಷ್ಟು ಹೆಚ್ಚು ಮತದಾನವಾಗಿದೆ. ಯಾವುದೇ ಅಹಿತಕರ ಘಟನೆಗಳಿಲ್ಲದೆ ಮತದಾನ ನಡೆದಿರುವುದು ಸಮಾಧಾನ ತಂದ ವಿಷಯ.

ಎಂಟು ವಿಧಾನ ಸಭೆ ಕ್ಷೇತ್ರಗಳ ಮತಯಂತ್ರಗಳನ್ನು ಉಡುಪಿಯ ಸೈಂಟ್ ಸಿಸಿಲಿ ಶಿಕ್ಷಣ ಸಂಸ್ಥೆಯ ಡಿಮಸ್ಟರಿಂಗ್ ಕೇಂದ್ರಕ್ಕೆ ತಂದು ಕೆ.ಎಸ್.ಆರ್.ಪಿ. ಹಾಗೂ ಸಿಆರ್‌ಪಿಎಫ್ ದಳಗಳ ಭದ್ರ ಕಣ್ಗಾವಲುಗಳಲ್ಲಿ ಇರಿಸಲಾಗಿದೆ. ಎಲ್ಲಾ ಸ್ಟ್ರಾಂಗ್ ರೂಮ್‌ಗಳಲ್ಲಿ ವಿದ್ಯುತ್ ಸೋರಿಕೆ, ಲೋಪಗಳಿಂದ ಸಮಸ್ಯೆಯಾಗದಂತೆ ಅಧಿಕೃತವಾಗಿ ವಿದ್ಯುತ್ ಕಡಿತಗೊಳಿಸಿ ಸಿಸಿಟಿವಿ ಕಣ್ಗಾವಲು ಇರಿಸಲಾಗಿದೆ. ಜಿಲ್ಲಾಧಿಕಾರಿ ಕಛೇರಿ, ವೀಕ್ಷಕರ ಕಛೇರಿ ಮೂಲಕ ನೇರವಾಗಿ ವೀಕ್ಷಿಸುವ ವ್ಯವಸ್ಥೆ ಇದೆ.

ಇನ್ನು ಮೇ 23 ರಂದೇ ಸೀಲ್ ಮಾಡಿದ ಭದ್ರತಾ ಕೊಠಡಿ ತೆರವು ಹಾಗೂ ಮತ ಎಣಿಕೆ ಪ್ರಕ್ರಿಯೆ ನಡೆಯಲಿದೆ.

ಉಡುಪಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಒಟ್ಟು 11,13,222 ಮಂದಿ ಅಂದರೆ ಸರಾಸರಿ 75.91 ಮತದಾರರು ಮತ ಚಲಾಯಿಸಿದ್ದಾರೆ. ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಶೇ 77.66 ಮತದಾನ ಆಗಿದೆ ಉಡುಪಿ 78.77 , ಕಾರ್ಕಳ 78.39, ಶೃಂಗೇರಿ 78.90 ಹೆಚ್ಚು ಮತದಾನವಾದ ವಿಧಾನಸಭಾ ಕ್ಷೇತ್ರಗಳು, ಕಾಪು 77.89 ಮತದಾನವಾಗಿದೆ.

ಬಿಜೆಪಿ ಹಾಗೂ ಮೈತ್ರಿ ಪಕ್ಷಗಳ ಅಭ್ಯರ್ಥಿಗಳ ಪರವಾಗಿದ್ದವರೆಲ್ಲರೂ ಗೆಲುವಿನ ಆಶಯ ಹೊಂದಿದ್ದರೂ ಬಿಜೆಪಿ ಕಾರ್ಯಕರ್ತರು ಹೆಚ್ಚು ಆತ್ಮ ವಿಶ್ವಾಸದಿಂದಿದ್ದಾರೆ. ಬಿಜೆಪಿ ನಾಯಕರು ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಪ್ರಚಾರದಲ್ಲಿ ತೊಡಗಿಸಿಕೊಂಡದ್ದು ಕಂಡುಬಂತು.

ಜಾತಿ ಸಮುದಾಯದ ಲೆಕ್ಕದಲ್ಲಿ ಮತ ಕೇಳುತ್ತಾ ಇದ್ದಾರೆ ಎಂಬ ವಿಷಯ ಸ್ವಲ್ಪ ವಿವಾದಕ್ಕೆ ಕಾರಣವಾದರೂ ಮತದಾನದ ದಿನ ಅದರ ಪ್ರಭಾವವೇನೂ ಕಂಡು ಬರಲಿಲ್ಲ.

## ಚುನಾವಣಾ ಸ್ವಾರಸ್ಯ

**ಎರಡು ಕೈಗಳಿಗೆ ಗುರುತು :**

ಕುಂದಾಪುರದ ಬೂತ್ ಒಂದರಲ್ಲಿ ಬೆರಳಿಗೆ ಇಂಕ್ ಹಾಕುವವರು ಬಲಗೈಗೆ ಹಾಕುತ್ತಿದ್ದರು. ನಿವೃತ್ತ ಶಿಕ್ಷಕರೊಬ್ಬರು ಎಡಗೈಗೆ ಹಾಕಬೇಕು ಎಂದು ಎರಡೆರಡು ಬಾರಿ ಹೇಳಿದ ಮೇಲೆ ಗೊಂದಲಕ್ಕೊಳಗಾದ ಲೇಡಿ ಎರಡು ಕೈಗಳ ಬೆರಳಿಗೆ ಹಾಕಲಾರಂಭಿಸಿದಳು. ಎಡಗೈ ಸರಿಯಾದುದು ಅಂದ ಮೇಲೆ ಎಡಗೈ ತೋರುಬೆರಳಿಗೆ ಶಾಯಿ ಮುಂದುವರಿಸಲಾಯಿತು.

2 ಮತದಾನ ಕೇಂದ್ರದ ಬಳಿ ಮೊಬೈಲ್ ಬಳಸಬಾರದು ಎಂಬ ನಿಯಮವಿದ್ದರೂ ಕೇಂದ್ರದ ಬಳಿ ಜವಾಬ್ದಾರಿಯಲ್ಲಿರುವ ಸಿಬ್ಬಂದಿಗಳು, ಸಾಲಿನಲ್ಲಿ ನಿಂತವರು, ಪಕ್ಷಗಳ ಪ್ರತಿನಿಧಿಗಳು ಕೆಲವೆಡೆ ಮೊಬೈಲ್ ಬಳಸುತ್ತಿರುವುದು ಕಂಡು ಬಂತು.

3. ಎಲ್ಲರ ಕೈಗೆ ಮನೆಯಿಂದ ತಂದ ಗುರುತಿನ ಚೀಟಿ ಇದ್ದುದರಿಂದ ಮೇಜು ಹಾಕಿಕೊಂಡು ಕುಳಿತ ಪಕ್ಷಗಳ ಕಾರ್ಯಕರ್ತರಿಗೆ ಕೆಲಸವೇನೂ ಇರಲಿಲ್ಲ.

4. 18 ರಂದು ಮದುವೆ ಸಮಾರಂಭಗಳು ಇದ್ದುದರಿಂದ ಬೆಳಗ್ಗಿನ 7 ಗಂಟೆಯ ಸರತಿ ಸಾಲಿನಲ್ಲಿ ಮದುವೆಗೆ ಹೋಗುವವರ ಸಂಖ್ಯೆ ಜಾಸ್ತಿ ಇತ್ತು.




## ಮೋದಿ ಅಲೆ ಏರಿ ಸಾಗಬಲ್ಲದೇ ಮೈತ್ರಿ ದೋಣಿ?





ಬೈಂದೂರು – ಶಿವಮೊಗ್ಗ ಲೋಕಸಭಾ ಕ್ಷೇತ್ರ ಚುನಾವಣೆಯ ಕಾವು ಏರಿಸಲು ರಾಷ್ಟ್ರ, ರಾಜ್ಯ ನಾಯಕರು ಬೈಂದೂರಿನಲ್ಲಿ ಹೆಚ್ಚು ಮುತುವರ್ಜಿ ವಹಿಸದಿದ್ದರೂ ಕೆಲವು ಪ್ರಮುಖರು ಬೈಂದೂರಿನ ಗ್ರಾಮಾಂತರ ಸ್ಥಳಗಳಿಗೆ ಭೇಟಿ ನೀಡಿ ಜನರನ್ನು ಪಕ್ಷದ ಪರ ಮತದಾನ ಮಾಡುವಂತೆ ಮನವೊಲಿಸುವ ಕಾರ್ಯಕ್ರಮಗಳು ಜರುಗಿವೆ.

ಆದರೂ "ಇಲೆಕ್ಷನ್ ಹೊಡೆತ ಇಲ್ದೇ" ಎಂದೇ ಜನ ಆಡಿಕೊಳ್ಳುತ್ತಿದ್ದಾರೆ. ಹಾಲಿ ಶಾಸಕರು, ಮಾಜಿ ಶಾಸಕರ ನೇತೃತ್ವದಲ್ಲಿ ನಡೆಯುತ್ತಿರುವ ಚುನಾವಣಾ ಪ್ರಚಾರದಲ್ಲಿ ಒಂದು ಹೆಜ್ಜೆ ಬಿಜೆಪಿಯೇ ಮುಂದಿದೆ ಎನ್ನಬಹುದು. ಕಾಂಗ್ರೆಸ್ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ರಾಷ್ಟ್ರೀಯವಾಗಿ ತಮ್ಮ ಪ್ರಧಾನಿ ಅಭ್ಯರ್ಥಿಯನ್ನು ಬಿಂಬಿಸುವಲ್ಲಿ ಸಮರ್ಥರಾಗದಿರುವುದು ಈ ಲೋಕಸಭಾ ಕ್ಷೇತ್ರದಲ್ಲೂ ಬಿಜೆಪಿಗೆ ಅನುಕೂಲವಾಗಿದೆ.

ವಸ್ತು, ವಸ್ತ್ರ, ವ್ಯವಹಾರ ಎಲ್ಲದರಲ್ಲೂ ಮೋದಿ ಬ್ರಾಂಡ್ ಪ್ರಚಾರ ನಡೆಯುತ್ತಿದೆ. ಹೀಗಾಗಿ ಅಭ್ಯರ್ಥಿಗಿಂತ "ಮೋದಿ ಇನ್ನೊಮ್ಮೆ" ಎಂಬ ಮಾತೇ ಯುವಕರ ಆಕರ್ಷಣೆ. ಬಿಜೆಪಿಯ ಪ್ರಮುಖ ಕೇಂದ್ರ ಸ್ಥಳಗಳಾದ ಗಂಗೊಳ್ಳಿ ಸಿದ್ಧಾಪುರ, ಅಂಪಾರು, ಅಮಾಸೆಬೈಲು ಸೇರಿ ಬೈಂದೂರಿನ ಹಲವು ಹೆಚ್ಚು ಮತಗಳುಳ್ಳ ಸ್ಥಳಗಳಲೆಲ್ಲ ಬಿಜೆಪಿ ಜಾಥಾ ಮತ್ತು ಪ್ರಚಾರ ಸಭೆಗಳಲ್ಲಿ ಹೆಚ್ಚು ಪ್ರಭಾವ ಬೀರುವ ಕೆಲಸ ಮಾಡಿದೆ. ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಅವರೊಂದಿಗೆ ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ಮಂಗಳೂರು ದಕ್ಷಿಣದ ಶಾಸಕ ವೇದವ್ಯಾಸ ಕಾಮತ್ ಉಡುಪಿ–ಮಂಗಳೂರು ವಿಭಾಗದ ವಿವಿಧ ಪ್ರಮುಖ ದಂಡೇ ಪ್ರಚಾರ ಕೊನೆಯ ಎರಡು ದಿನಗಳಲ್ಲಿ ಇಲ್ಲಿ ಕಾರ್ಯಕರ್ತರ ಹಾಗೂ ಮತದಾರರ ಉತ್ಸಾಹ ಇಮ್ಮಡಿಗೊಳಿಸುವ ಪ್ರಯತ್ನ ನಡೆಸಿದೆ.

ಮೋದಿ ಪರವಾಗಿ ಓಟು ಕೇಳಬೇಡಿ. ಅಭ್ಯರ್ಥಿಗಳ ಪರವಾಗಿ ಓಟು ಕೇಳಿ ಸ್ಪರ್ಧೆಗೆ ಬನ್ನಿ ಎಂದು ಮೋದಿ ಮೋದಿ – ಉದ್ಗಾರವನ್ನು ಟೀಕಿಸುತ್ತಾ ಬಂದಿರುವ ಮಾಜಿ ಶಾಸಕ ಗೋಪಾಲ ಪೂಜಾರಿಯವರೂ ಸಹ ಮಧು ಬಂಗಾರಪ್ಪ ಅವರಿಗೇ ಮತ ನೀಡಿ ಎಂದು ಮತದಾರರಿಗೆ ಮನವಿ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಶಕ್ತಿಯನ್ನು ಜೆಡಿಎಸ್ ಇಲ್ಲಿ ನಂಬಿಕೊಂಡಿದೆ.

## ಎಲ್ಲ ಮೋದಿಮಯ









* ಮೋದಿ ಅಭಿಮಾನಿಗಳ ವಿವಿಧ ಶರ್ಟು, ಸೀರೆ, ಟೀ ಶರ್ಟ್ ಬನಿಯನ್ ಪೇಟಾ ಗಮನ ಸೆಳೆಯುತ್ತಿವೆ. ಎಷ್ಟೋ ಮನೆಗಳಲ್ಲಿ ಯುವಕ–ಯುವತಿಯರು ವಯಸ್ಕರು ಇವುಗಳನ್ನು ಧರಿಸಿ ಜಾಲತಾಣಗಳಲ್ಲಿ ಫೋಟೋ , ವಿಡೀಯೋ ಹಾಕುತ್ತಿರುವುದು ಕಂಡುಬಂತು .

* ಒಂದು ಸಭಾಂಗಣದಲ್ಲಿ ನಡೆದ ಭೋಜನದಲ್ಲಿ, ಬಡಿಸುವವರು, ಮೋದಿ ಸಾರು, ಮೋದಿ ಅನ್ನ, ಮೋದಿ ಪಾಯಸ, ಮೋದಿ ಮಜ್ಜಿಗೆ ಎಂದು ಹೇಳಿಕೊಂಡೇ ಬಡಿಸುತ್ತಿರುವುದು ಕಂಡುಬಂದಿದೆ.

* ರಥೋತ್ಸವದ ಓಕುಳಿಯಲ್ಲಿ ಭಾಗವಹಿಸಿದ ಹುಡುಗರು ಅತ್ತ ಮೋದಿ ಪರ ಜಾಥಾ ಹೋಗುತ್ತಿರುವುದನ್ನು ಕಂಡು "ಮೋದಿ ಬಣ್ಣ" ಎನ್ನುತ್ತಾ ನೀರೆರೆಚಿಕೊಂಡರು.

* ಕಾಂಗ್ರೆಸ್ ಕಛೇರಿ ಎದುರು ಮೋದಿ ಮೋದಿ ಎಂದು ಯುವಕರು ಕೂಗಿದ ಆರೋಪದಲ್ಲಿ ದೇವಸ್ಥಾನದ ಮೊಕ್ತೇಸರರ ಮೇಲೂ ದೂರುದಾಖಲಾಯಿತು.

* ಮೋದಿಯ ಬಗ್ಗೆ ರಚನೆಯಾದಷ್ಟು ಹಾಡುಗಳು ಯಾವ ಪ್ರಧಾನಿ ಅಭ್ಯರ್ಥಿಯ ಮೇಲೂ ಆಗಿರಲಿಕ್ಕಿಲ್ಲ. ಕನ್ನಡದಲ್ಲಂತೂ ಹಲವು ಯುವ ಗಾಯಕರು ಮೋದಿ ಬಗ್ಗೆ ಜನಪ್ರಿಯ ಕನ್ನಡ ಹಾಡುಗಳ ಹಿನ್ನೆಲೆ ಸಂಗೀತ ಬಳಸಿ ಹಾಡಿದ್ದಾರೆ. ಕುಂದಾಪುರವೂ ಇದರಲ್ಲಿ ಹಿಂದೆ ಬೀಳಲಿಲ್ಲ!

## ಶಿವಮೊಗ್ಗ ಲೋಕಸಭಾ ಚುನಾವಣೆ– ಬೈಂದೂರು ಕುಂದಾಪುರದಲ್ಲಿ 144 ಸೆಕ್ಷನ್ ಜಾರಿ

ಲೋಕಸಭಾ ಚುನಾವಣೆ 2019 ಕ್ಕೆ ಸಂಬಂಧಿಸಿದಂತೆ, ಏಪ್ರಿಲ್ 23 ರಂದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಮತದಾನ ನಡೆಯಲಿದ್ದು, ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರ ಶಿವಮೊಗ್ಗ ಲೋಕಸಭಾ ವ್ಯಾಪ್ತಿಯಲ್ಲಿ ಬರುವುದರಿಂದ, ಸಾರ್ವಜನಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಮೂಲಕ , ಮುಕ್ತ ಮತ್ತು ನ್ಯಾಯಯುತ ಹಾಗೂ ನಿಷ್ಪಕ್ಷಪಾತವಾಗಿ ಚುನಾವಣೆಯನ್ನು ನಡೆಸುವ ನಿಟ್ಟಿನಲ್ಲಿ , ಬೈಂದೂರು ಮತ್ತು ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ , ಏಪ್ರಿಲ್ 21 ರಂದು ಸಂಜೆ 6 ಗಂಟೆಯಿಂದ ಏಪ್ರಿಲ್ 24 ರ ಬೆಳಗ್ಗೆ 6 ಗಂಟೆಯವರೆಗೆ ಸೆಕ್ಷನ್ 144 ರಂತೆ ನಿಷೇದಾಜ್ಞೆ ವಿಧಿಸಿ , ಜಿಲ್ಲಾಧಿಕಾರಿ ಹೆಪ್ಸಿಬಾ ರಾಣಿ ಕೊರ್ಲಪಾಟಿ ಆದೇಶಿಸಿದ್ದಾರೆ.